ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ

ಚನ್ನಪಟ್ಟಣ.

CC No. 226/2016

CW-4 PW-2

| | |
|---|---|
| ಹೆಸರು | ಃ ಸಿದ್ದೇಶ |
| ಗಂಡನ ಹೆಸರು/ತಂದೆಯ ಹೆಸರು | ಃ ಲೇಟ್ ನಿಂಗಯ್ಯ |
| ವಯಸ್ಸು | ಃ 48 ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸ | ಃ ಸುಳ್ಳೇರಿ. |

**ದಿನಾಂಕ 01.10.2022 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಗೊತ್ತು. ಚಾಸಾ-1 ಗೊತ್ತು. ನನಗೆ ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲ. ನಾನು ತನಿಖಾಧಿಕಾರಿಗಳ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದೆ ಇರುವ ಮು ಮಾ 1 ನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**<u>ಪಾಟೀ ಸವಾಲುಃ ಎಪಿಪಿಯವರಿಂದಃ</u>**

ದಿನಾಂಕ 31.12.2015 ರಂದು ಸಂಜೆ 4.00 ಗಂಟೆಯ ಸಮಯದಲ್ಲಿ ನಾನು 2 ನೇ ಆರೋಪಿಯನ್ನು ನೋಡಲು ಅವರ ಮನೆಗೆ ಹೋದಾಗ ಮನೆಯಲ್ಲಿ ಜಗಳ ನಡೆಯುತ್ತಿದ್ದು, ಚಾಸಾ1 ರವರ ಎಡಗೈಗೆ ಸ್ವಲ್ಪ ಏಟಾಗಿದ್ದು 1 ಮತ್ತು 2 ನೇ ಆರೋಪಿತರು ಚಾಸಾ1 ರವರಿಗೆ ಬೈದು, ಜಗಳ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನೀವೆಲ್ಲಾ ಸಂಬಂದಿಕರು ಯಾಕೆ ಜಗಳ ಮಾಡುತ್ತಿದ್ದೀರಿ ಎಂದು ಜಗಳ ಬಿಡಿಸಿ ಗಲಾಟೆಯ ಬಗ್ಗೆ ವಿಚಾರಿಸಿದಾಗ ಚಾಸಾ1 ರವರು 1 ನೇ ಆರೋಪಿ ಅಕ್ಕಿ ಮತ್ತು ರಾಗಿಯನ್ನು ಅಳತೆ ಮಾಡಿ ಕೊಡುತ್ತಿದ್ದು ಅದಕ್ಕೆ ನಾನು ನೀನೇನು ನನಗೆ ಅತ್ತೆನಾ ಅಳತೆ ಮಾಡಿಕೊಡುವುದಕ್ಕೆ ಎಂದು ಹೇಳಿದಾಗ ಇದು ನನ್ನ ತಂದೆ ಮನೆ, ಈ ಮನೆಯಲ್ಲಿ ನಿನಗೇನು ಅಧಿಕಾರಿ ಇಲ್ಲ ಎಂದು ಜಗಳ ತೆಗೆದು ನ್ಯಾಯಾಲಯದ ಮುಂದೆ ಇರುವ ಮು ಮಾ 1  ರಿಂದ ಹೊಡೆದು 2 ನೇ ಆರೋಪಿಯೂ ಸಹ ನನಗೆ ಬೈದು ಜಗಳ ಮಾಡಿದರು ಎಂದು ತಿಳಿಸಿದಳು ನಾನು ನೋಡಿದಾಗ ಚಾಸಾ1 ರವರ ಎಡಗೈಗೆ ಸ್ವಲ್ಪ ಏಟಾಗಿದ್ದು ಎಂದು ಸಮಾಧಾ ನ ಹೇಳಿ ಇದೇ ರೀತಿಯಾಗಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.  ನಿಪಿ-3 ರಲ್ಲಿರುವ ಪೂರ್ಣ ಸಂಗತಿ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಇಲ್ಲ</u>**

**<u>ಮರುವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಓ

3

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.